# ಕುವೆಂಪು ವಿಶ್ವವಿದ್ಯಾಲಯ

**ನಿರ್ದೇಶಕರ ಕಾರ್ಯಾಲಯ,**

**ದೂರ ಶಿಕ್ಷಣ ನಿರ್ದೇಶನಾಲಯ**

ಜ್ಞಾನ ಸಹ್ಯಾದ್ರಿ, ಶಂಕರಘಟ್ಟ-577451, ಶಿವಮೊಗ್ಗ ಜಿಲ್ಲೆ, ಕರ್ನಾಟಕ

ದೂರವಾಣಿ: 08282-256450 ಮತ್ತು 256246


ಸಂಖ್ಯೆ:ಕುವಿ/ದೂಶಿನಿ–07/2017–18/ 171 ದಿನಾಂಕ: 21–04–2017

## ಸುತ್ತೋಲೆ

ವಿಷಯ:– ಸಂಪರ್ಕ ಮತ್ತು ಪ್ರಾಯೋಗಿಕ ತರಗತಿಗಳಿಗಾಗಿ ಸಲ್ಲಿಸುವ ಮುಂಗಡ ಹುಂಡಿಗಳ ಕುರಿತು.

ಉಲ್ಲೇಖ:– ಸುತ್ತೋಲೆ ಸಂಖ್ಯೆ: ಕುವಿ/ಆರ್ಥಿಕ–03/71/2016–17/ ದಿನಾಂಕ: 07–04–2016

–*–*–

ಕುವೆಂಪು ವಿಶ್ವವಿದ್ಯಾಲಯದ ದೂರ ಶಿಕ್ಷಣ ನಿರ್ದೇಶನಾಲಯದಡಿ ಸ್ನಾತಕ / ಸ್ನಾತಕೋತ್ತರ / ಪಿ.ಜಿ. ಡಿಪ್ಲೋಮ ಪದವಿಗಳಲ್ಲಿ ನೇರವಾಗಿ ನೋಂದಾಯಿಸಿಕೊಂಡ ವಿದ್ಯಾರ್ಥಿಗಳಿಗೆ ಸಂಪರ್ಕ ಹಾಗೂ ಪ್ರಾಯೋಗಿಕ ತರಗತಿಗಳನ್ನು ನಡೆಸುವ ಸಲುವಾಗಿ ಆಯಾ ವಿಷಯ / ವಿಷಯಗುಚ್ಛದ ಕೋರ್ಸ್ ಕೋ–ಆರ್ಡಿನೇಟರ್‌ರವರು ಈ ಹಿಂದಿನ ಸಾಲುಗಳಲ್ಲಿ ಎ.ಸಿ ಹುಂಡಿಯ ಮೂಲಕ ಮುಂಗಡವಾಗಿ ಹಣ ಪಡೆದು ನಂತರದಲ್ಲಿ ಸದರಿ ಎ.ಸಿ ಹುಂಡಿಗೆ ಎನ್.ಡಿ.ಸಿ ಹುಂಡಿಗಳನ್ನು ಸಲ್ಲಿಸುತ್ತಿದ್ದರು.

ಆದರೆ, ಹಣಕಾಸು ಅಧಿಕಾರಿಗಳು ಉಲ್ಲೇಖಿತ ಸುತ್ತೋಲೆಯಲ್ಲಿ ಪ್ರಸಕ್ತ ಸಾಲಿನಿಂದ ಹಣಕಾಸು ವಿಭಾಗದಿಂದ ಪಾವತಿಯಾಗುವ ಮೊತ್ತವನ್ನು ನೇರವಾಗಿ ಸಂಬಂಧಿಸಿದವರ ಖಾತೆಗೆ RTGS / NEFT ನ ಮೂಲಕ ಜಮೆ ಮಾಡುವುದಾಗಿ ತಿಳಿಸಿರುವ ಹಿನ್ನೆಲೆಯಲ್ಲಿ ಪ್ರಸಕ್ತ ಸಾಲಿನಿಂದ ದೂರ ಶಿಕ್ಷಣ ನಿರ್ದೇಶನಾಲಯದಡಿಯಲ್ಲಿ ನೇರವಾಗಿ ನೋಂದಾಯಿಸಿಕೊಂಡ ವಿದ್ಯಾರ್ಥಿಗಳಿಗೆ ಸಂಪರ್ಕ ಹಾಗೂ ಪ್ರಾಯೋಗಿಕ ತರಗತಿಗಳನ್ನು ನಡೆಸುವ ಸಲುವಾಗಿ ಮುಂಗಡವಾಗಿ ಎ.ಸಿ ಹುಂಡಿಯ ಮೂಲಕ ಹಣ ಪಡೆಯುವ ಪ್ರಕ್ರಿಯೆಯನ್ನು ಸ್ಥಗಿತಗೊಳಿಸಲಾಗಿದ್ದು, ಸಂಪರ್ಕ ತರಗತಿಗಳು ಮುಕ್ತಾಯಗೊಂಡ ನಂತರದಲ್ಲಿ ಡಿ.ಸಿ ಹುಂಡಿಯನ್ನು ಅಗತ್ಯ ವೋಚರ್‌ಗಳೊಂದಿಗೆ ಮರುಭರಿಕೆಗಾಗಿ ಸಲ್ಲಿಸುವುದು ಹಾಗೂ ಡಿ.ಸಿ ಹುಂಡಿಯನ್ನು ಸಲ್ಲಿಸುವಾಗ ಸಂಬಂಧಿಸಿದವರ ಬ್ಯಾಂಕ್ ಖಾತೆ ಸಂಖ್ಯೆ, ಐ.ಎಫ್.ಎಸ್.ಸಿ ಕೋಡ್, ಹಾಗೂ ಪಾನ್ ಕಾರ್ಡ್ ಜೆರಾಕ್ಸ್ ಪ್ರತಿಗಳನ್ನು ಕಡ್ಡಾಯವಾಗಿ ಡಿ.ಸಿ ಹುಂಡಿಗೆ ಲಗತ್ತಿಸಿ ನಿರ್ದೇಶಕರು, ದೂರ ಶಿಕ್ಷಣ ನಿರ್ದೇಶನಾಲಯ ಇವರ ಮೇಲು ಸಹಿಯೊಂದಿಗೆ ಸಲ್ಲಿಸಲು ಈ ಮೂಲಕ ತಿಳಿಸಲಾಗಿದೆ.

ನಿರ್ದೇಶಕರು
ದೂರ ಶಿಕ್ಷಣ ನಿರ್ದೇಶನಾಲಯ
ಕುವೆಂಪು ವಿಶ್ವವಿದ್ಯಾನಿಲಯ
ಶಂಕರಘಟ್ಟ - 577 451

ಗೆ,

ದೂರ ಶಿಕ್ಷಣ ನಿರ್ದೇಶನಾಲಯದ ಎಲ್ಲಾ ಕೋರ್ಸ್ ಕೋ–ಆರ್ಡಿನೇಟರ್‌ಗಳಿಗೆ,